ಆಮ್ಯಾಕೆ ಎಲ್ಲಾಗದ್ರು ವೊಂಟೋಗನ ಅಂತ ಊರ್ಜಗ್ಲಿ ಮ್ಯಾಲೆ ಕುತ್ಕಂಡು ಮಗೀಗೆ ಆಲ್ಕುಡ್ಸತ್ತಾ ಮುಂದೇನು ಅಂತ ಚಿಂತೆ ಮಾಡೊಕತ್ತಿದ್ಲು. ಕತ್ಲಾಗುವಾಗ ಶಾನೆ ಎದರ್ಕೆ ಆಗಿ ಈ ಎಳೆ ಬೊಮ್ಮೆನಾ ಕಟ್ಕಂಡು ಈ ರಾತ್ರಿಲಿ, ಈ ಚಳ್ಯಾಗೆ ಈ ಮರದ್ನೆಳ್ಗೆ ಎಂಗಿರೋದು ಅಂದ್ಕತ ಮಗೀಗೆ ಚಳಿಯಾಗ್ದಂತೆ ತನ್ನ ಸೀರೆನಾ ವೊದ್ಸಿ ತಾನೂ ಸೆರ್ಗನಾ ಗಟ್ಯಾಗಿ ಎಳ್ಕಂಡ್ಳು. ಅದೇ ವೊತ್ನಾಗೆ ಕೊನೆ ಬಸ್ನಲಿ ಇಳ್ಕಂಡು ಕಾಲೆಳ್ದಾಕ್ತ ಬತ್ತಿದ್ದವನ ಕಂಡು ಜಗಲಿ ಮ್ಯಾಗಿಂದ ಜಿಗ್ದು ಅವ್ನುಂದೆ ನಿಂತ್ಕಂಡ್ಳು. ಬೀದಿದೀಪ್ದ ಬೆಳ್ಕಲ್ಲಿ ಅವಳ್ನ ನೋಡಿ ದಂಗಾಗಿ ಸುಮ್ಕೆ ನಿಂತ್ಕಂಡು ಬುಟ್ಟ. ತಕ್ಷಣವೇ ಸಣ್ಣಿ ಅವ್ನ ಕಾಲಿಡ್ಕಂಡು “ನನ್ನ ತಪ್ನ ಕ್ಷಮುಸ್ಬುಡು. ನಾನೇ ಮಾಡ್ಕಂಡ ತಪ್ಗೆ ಆ ದ್ಯಾವ್ರು ಸರ್‍ಯಾದ ಸಿಕ್ಷೆನೆ ಕೊಟ್ಟವ್ನೆ. ಅದ್ನ ಯೋಳಿವೋಗಾಕೆ ಅಂತ ಬಂದಿವ್ನಿ. ನನ್ನ ಕತೆ ನಿಮ್ಗೂ ಗೊತಾಗ್ಯೆತೆ ಅಲ್ವಾ. ಈ ಪಾಪಿನಾ ಕ್ಷಮ್ಸಿದ್ನಿ ಅಂತ ಒಂದ್ಕಿತಾ ಯೋಳಿ ಬುಡು, ಆಮೇಕೆ ನಾನು ವೊಂಟೋಯ್ತಿನಿ” ಅಂತ ಕಣ್ಣೆರಾಕ್ತಾ ಅಂದ್ಲು. ಅವ್ಳು ಮದ್ವಾದುದ್ದು, ಅವ್ಳ ಗಂಡುನ್ನ ಕತ್ರಸಾಕಿದ್ದು, ಅವ್ನ ಮಗೀನಾ ಅವ್ಳೆ ಸಾಕ್ತಿನಿ ಅಂತ ಮನ್ಯವ್ರ ವಿರುದ್ದ ನಿಂತ್ಕಂಡಿದ್ದು ಎಲ್ಲಾನೂ ಅವ್ನಿಗೆ ನೆಂಟ್ರಿಂದ ಗೊತ್ತಾಗಿತ್ತು. ಅಂಗಾಗ್ಬೇಕು ಆ ಲೌಡಿಗೆ ಅಂತ ಮನ್ಯಾವ್ರೆಲ್ಲ ಅಂದ್ರೂ ಅವ್ನಗೆ ಮಾತ್ರಾ ಏನೂ ಅನ್ಸಿರ್‍ಲಿಲ್ಲ. ಈಗಾ ಇಂಗೆ ದುತ್ತಂತ ಇ ರಾತ್ರಿಲೀ ತನ್ಮುಂದೆ ನಿಂತ್ಕಂತಳೆ ಅಂತ ಕನ್ಸಮನ್ಸಲೂ ಅಂದ್ಕಂಡಿರ್‍ಲಿಲ್ಲ. ಏನೂ ಗೊತ್ತಾಗ್ದೆ “ಮತ್ತೆ... ಮತ್ತೆ... ಇಕತ್ಲಾಗೆ ಎಲ್ಗೆವೊಂಟಿದಿಯಾ'' ಅಂತ ಮೆತ್ಗೆ ಕೇಳ್ದ. ಅವಳು ಮಾತಾಡ್ಲೆ ಇಲ್ಲ.ಕ್ಷಣವೊತ್ತು ಅಂಗೆ ನಿಂತ್ಕಂಡು “ನಮ್ಮನಿಗೆ ಬತ್ತಿಯಾ” ಅಂತ ಕೇಳ್ದ. ಅದಕ್ಕೂ ಅವ್ಳು ಮಾತಾಡ್ಲೆ ಇಲ್ಲಾ.‘‘ನಮ್ಮವ್ವ, ಅಪ್ಪ ಒಪ್ಕಾಳಕಿಲ್ಲ, ಬೈತಾರೆ ಅಂತ ಬಯನಾ, ಅವರ್‍ಗೆ ನಾ ಯೋಳ್ಕತಿನಿ, ಬಾ ನೀನು ಸುಮ್ಕೆ'' ಅಂತ ಕೇಳ್ಕಂಡ. ಮತ್ತೂ ಅವ್ಳು ಮಾತಾಡ್ದೆ ನಿಂತ್ಕಂಡಾಗ ಅವ್ನು ನಿದಾನ್ವಾಗಿ ಜಗ್ಲಿಮ್ಯಾಗೆ ಮಂಗ್ಸಿದ್ದ ಮಗೀನಾ ಎತ್ಕಂಡು “ನಡಿ ವೋಗಾನ” ಅಂದ. ಅವ್ನು ವೋಗಾದನ್ನ ತಡೀತಾ “ಈ ಮಗೀನಾ ಅವ್ವಾ ನಾನು, ನೀನು ಇದಕ್ಕೆ ಅಪ್ಪ ಆಯ್ತಿಯಾ” ಅಂತ ಸಣ್ಣಿ ಕೇಳುದ್ಲು. ನಿದ್ದೆ ಮಾಡ್ತಿದ್ದ ಆ ಮಗೀನಾ ಮುಕನೆ ನೋಡ್ತಾ ಒಂದ್ಗಳ್ಗೆ ಅವನ್ಗೆ ಯೋನೆಳ್ಬೆಕು ಅಂತ ಗೊತ್ತಾಗ್ನೆ ಇಲ್ಲ. ಕ್ಷಣ ಬುಟ್ಟು ‘‘ಇದಕ್ಕೊಂದು ತಂಗಿನಾ ಕೊಡ್ತಿನಂದ್ರೆ ಇದಕ್ಕೆ ಅಪ್ಪ ಆಯ್ತಿನಿ'' ಅಂತ ಯೋಳಿ ಅವ್ಳ ಮುಕನೆ ನೋಡ್ದ. ಅವ್ನ ಮಾತ್ಕೇಳಿ ಅವಳ್ವೊಟ್ಟೆಗೆ ಹಾಲ್ಸುರ್‍ದಂಗಾತು. ‘‘ತಂಗಿ ಜೋತ್ಗೆ ತಮ್ಮನ್ನೂ ಬೇಕಾದ್ರೆ ಕೊಡ್ತಿನಿ'' ಅಂತ ಸಡ್ಗರದಿಂದ ಏಳ್ತಾ ಅವ್ನಕೈಲಿದ್ದ ಮಗೀನ ತಾನೇ ಎತ್ಕಂಡು ಸಣ್ಣಿ ಕುಸ್ಕುಸಿಯಿಂದ ಅವನ್ಜೊತೆ ಅವ್ನ ಮನೆಕಡೀಕೆ ವೊಂಟ್ಳು.

## ಶೈಲಜಾ ಹಾಸನ

ಶಿಕ್ಷಕ ವೃತ್ತಿಯಲ್ಲಿರುವ ಶೈಲಜಾ ಪ್ರಸ್ತುತ ಹಾಸನದಲ್ಲಿ ನೆಲೆಸಿದ್ದಾರೆ. ಕತೆ, ಕಾದಂಬರಿ ಅವರು ಮುಖ್ಯವಾಗಿ ಕೆಲಸ ಮಾಡಿರುವ ಪ್ರಮುಖ ಕ್ಷೇತ್ರಗಳು. ಅವರ ಕಾದಂಬರಿಗಳು ‘ಸುಧಾ’ ವಾರಪತ್ರಿಕೆಯಲ್ಲಿ ಧಾರಾವಾಹಿಗಳಾಗಿ ಪ್ರಕಟವಾಗಿವೆ. ಕವಿತೆ, ಅಂಕಣ, ಮಕ್ಕಳ ಸಾಹಿತ್ಯದ ಪುಸ್ತಕಗಳನ್ನೂ ಅವರು ಪ್ರಕಟಿಸಿದ್ದಾರೆ.